

ಟಿಪ್ಪೂನ ಪಿಸ್ತೂಲುಗಳು




ಮ್ಯೂಸಿಯಂ ಮುಂದೆ ಲೇಖಕರು

## ಬೇಡಿ ಪಡೆ, ಎರವಲು ಪಡೆ ಅಥವಾ ಕದ್ದು ತಾ!

16ನೇ ಶತಮಾನದ ಅಂತ್ಯದಿಂದ 20ನೇ ಶತಮಾನದವರೆಗೂ ಒಂದು ಪುಟ್ಟ ದೇಶವಾದ ಇಂಗ್ಲೆಂಡ್ ಜಗತ್ತಿನ ಎಲ್ಲೆಡೆ ತನ್ನ ವಸಾಹತುಗಳನ್ನು ಸ್ಥಾಪಿಸಿತ್ತು. 1913ರಲ್ಲಿ ಬ್ರಿಟಿಷ್ ಸಾಮ್ರಾಜ್ಯದಡಿಯಲ್ಲಿ 412 ದಶಲಕ್ಷ ಜನರಿದ್ದರು (ಆಗಿನ ಜನಸಂಖ್ಯೆಯ ಶೇ.23ರಷ್ಟು) ಹಾಗೂ 1920ರಲ್ಲಿ ಅದರ ಸಾಮ್ರಾಜ್ಯ 35,500,000 ಚದರ ಕೀ.ಮೀ.ಗಳಷ್ಟು ಪ್ರದೇಶವನ್ನು ವ್ಯಾಪಿಸಿತ್ತು. (ಭೂಮಿಯ ಒಟ್ಟು ಭೂ ಪ್ರದೇಶದ ಶೇ.24ರಷ್ಟು.) ಅವರ ಮ್ಯೂಸಿಯಂಗಳಲ್ಲಿ ಇಂದು ನಾವು ಕಾಣುವುದು ಅವರು ಆ ವಸಾಹತುಗಳಿಂದ ಕೊಳ್ಳೆ ಹೊಡೆದು ತಂದ, ಕದ್ದ ವಸ್ತುಗಳು. ನಾನು ಐರ್ಲೆಂಡಿನ ನವಶಿಲಾಯುಗದ ಸ್ಥಳವಾದ ನ್ಯೂ ಗ್ರಾಂಜ್‌ನಲ್ಲಿನ ಗೈಡ್‌ನ ಬಳಿ ಯಾವುದೋ ಬ್ರಿಟಿಷ್ ಮ್ಯೂಸಿಯಂನ ಉಲ್ಲೇಖ ಮಾಡಿದಾಗ ಆತ, 'ಅವರು ಬಿಡಿ. ಅವರು ಎಲ್ಲವನ್ನೂ Beg, Borrow or steal (ಬೇಡಿ ಪಡೆ, ಎರವಲು ಪಡೆ ಅಥವಾ ಕದ್ದು ತಾ) ಮಾಡಿಕೊಂಡು ತಂದಿರುತ್ತಾರೆ. ಅವರ ಬಳಿ ಅವರ ಸ್ವಂತದ್ದೇನಿದೆ?' ಎಂದ!

ರಚಿತವಾಗಿವೆ. ಟಿಪ್ಪೂನ ಕಾಲದ್ದೇ ಆದ ದಂತ ಕತೆಯೊಂದರಲ್ಲಿ ಹೈದರಾಲಿ ಟಿಪ್ಪೂನನ್ನು ಹೈದರಾಬಾದ್‌ಗೆ ಒಪ್ಪಂದವೊಂದರ ವಿಚಾರಕ್ಕೆ ಕಳುಹಿಸಿದ್ದಾಗ ಅಲ್ಲಿನ ಕಾಡೊಂದರಲ್ಲಿ ಹುಲಿಯೊಂದನ್ನು ಎದುರಿಸಿದ್ದನಂತೆ. 17951798ರ ಅವಧಿಯಲ್ಲಿ ನಿರ್ಮಾಣವಾಗಿರುವ ತುಮಕೂರು ಜಿಲ್ಲೆಯೊಂದರ ನರಸಿಂಹಸ್ವಾಮಿ ದೇವಾಲಯದ ಚಾವಣಿಯಲ್ಲಿ ಟಿಪ್ಪೂ ಹುಲಿಯೊಂದನ್ನು ತನ್ನ ಕತ್ತಿಯಿಂದ ಕೊಲ್ಲುತ್ತಿರುವ ಚಿತ್ರವಿದೆಯಂತೆ. 'ದೇವಿ ಚಾಮುಂಡಿಯ ವಾಹನವೂ ಆಗಿರುವ ಹುಲಿಯನ್ನು ತನ್ನ ಸಂಕೇತವನ್ನು ಟಿಪ್ಪೂ ಬಳಸಿಕೊಂಡಿದ್ದು ಧರ್ಮ ನಿರಪೇಕ್ಷತೆಯ ಆಗಿನ ಸಾಮಾಜಿಕ–ಧಾರ್ಮಿಕ ಪರಿಸರದ ಅಭಿವ್ಯಕ್ತಿ' ಎನ್ನುತ್ತಾರೆ ಚರಿತ್ರೆಕಾರರು.

## ಹುಲಿಯ 'ಯಂತ್ರ ಗೊಂಬೆ'

ಟಿಪ್ಪೂನ ಸಮಯದಲ್ಲಿ ಬ್ರಿಟಿಷರು ಆತನನ್ನು ಕಂಡು ಹೆದರುತ್ತಿದ್ದರು. ಬ್ರಿಟಿಷರು ಮೈಸೂರಿನ ಮೇಲೆ ನಾಲ್ಕು ಯುದ್ಧಗಳನ್ನು ನಡೆಸಿದ್ದರು. ಟಿಪ್ಪೂ ಸತ್ತಾಗ ಬ್ರಿಟನ್ನಿನಲ್ಲಿ ಸಂಭ್ರಮಾಚರಣೆಗಳು ನಡೆದುವಂತೆ. ಕವಿಗಳು, ನಾಟಕಕಾರರು ಹಾಗೂ ಚಿತ್ರಕಲಾವಿದರು ಆ ಘಟನೆಯನ್ನು ವರ್ಣಿಸಿ ತಮ್ಮ ಕೃತಿಗಳಲ್ಲಿ ಬಿಂಬಿಸಿದರು. ಟಿಪ್ಪೂನ ರಾಜಧಾನಿ ಶ್ರೀರಂಗಪಟ್ಟಣದ ಮೇಲಿನ ದಾಳಿ ಹಾಗೂ ಲೂಟಿಯು ಆಗಿನ ಬ್ರಿಟನ್ನಿನ ಹಲವಾರು ನಾಟಕ, ಚಿತ್ರಕಲೆಗಳಲ್ಲಿ ಕಂಡುಬಂದಿವೆ.

ಪರಕೀಯ ಬ್ರಿಟಿಷರ ಅಪಾಯವನ್ನು ಮನಗಂಡಿದ್ದ ಟಿಪ್ಪೂ ಅವರನ್ನು ಅಷ್ಟೇ ಕಟುವಾಗಿ ದ್ವೇಷಿಸುತ್ತಿದ್ದ. ಆ ದ್ವೇಷವೇ ಅವನನ್ನು ಬ್ರಿಟಿಷ್ ಸೈನಿಕನೊಬ್ಬನನ್ನು ಕೊಲ್ಲುತ್ತಿರುವ ಹುಲಿಯ ಯಂತ್ರ ಗೊಂಬೆ ತಯಾರಿಸಲು ಪ್ರೇರಣೆ ನೀಡಿದೆ. ಟಿಪ್ಪೂನ ಯಂತ್ರ ಹುಲಿ ಬ್ರಿಟಿಷ್ ಸೈನಿಕನನ್ನು ಕೊಲ್ಲುತ್ತಿದ್ದರೂ ಬ್ರಿಟಿಷರು ಟಿಪ್ಪೂ ಸತ್ತನಂತರ ಅದನ್ನು ಬ್ರಿಟನ್ನಿಗೆ ಕೊಂಡೊಯ್ದು ಆ ಬಿಳಿ ಸೈನಿಕ ಬ್ರಿಟಿಷ್‌ನವನೆಂದು ಒಪ್ಪಿಕೊಳ್ಳದೆ ಯಾರೋ ಯೂರೋಪಿಯನ್ ಸೈನಿಕನೆಂದರು. ದಾಖಲೆಗಳಲ್ಲಿ ಅದೇ ರೀತಿ ದಾಖಲಿಸಿದ್ದಾರೆ ಕೂಡ.

ಟಿಪ್ಪೂ ಪಾಶ್ಚಿಮಾತ್ಯ ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಆಕರ್ಷಿತನಾಗಿದ್ದ. ಆಗಲೇ ಫ್ರಾನ್ಸ್‌ನಿಂದ ಬಂದೂಕು ತಯಾರಿಸುವವರನ್ನು, ಇಂಜಿನಿಯರುಗಳನ್ನು ಮೈಸೂರಿಗೆ ಕರೆಸಿದ್ದನಲ್ಲದೆ ಬ್ರಿಟಿಷರನ್ನು ಬಗ್ಗುಬಡಿಯಲು ಫ್ರಾನ್ಸ್‌ನ ಸಹಕಾರವನ್ನು ಸಹ ಕೋರಿದ್ದ. ಆಗಲೇ ಮೈಸೂರಿನಲ್ಲೇ ಹಿತ್ತಾಳೆಯ ಫಿರಂಗಿ, ಮದ್ದುಗುಂಡುಗಳನ್ನು ತಯಾರಿಸುವ ವ್ಯವಸ್ಥೆ ಸಹ ಮಾಡಿದ್ದ. ಆ ಯಂತ್ರ ಹುಲಿಯನ್ನು ಫ್ರಾನ್ಸ್‌ನ ತಜ್ಞರೇ ಸುಮಾರು 1782ರಿಂದ 1799ರ ಅವಧಿಯಲ್ಲಿ ನಿರ್ಮಿಸಿರಬೇಕು ಎನ್ನುತ್ತಾರೆ.

ಮರದಿಂದ ಹೊರಭಾಗವನ್ನು ನಿರ್ಮಿಸಲಾಗಿರುವ ಆ ಯಂತ್ರ ಹುಲಿಯ ಎತ್ತರ 28 ಅಂಗುಲ ಮತ್ತು ಉದ್ದ 68 ಅಂಗುಲಗಳು. ಆ ಹುಲಿಯ ಎಡಭಾಗದಲ್ಲಿ ಹಿಡಿಯೊಂದಿದ್ದು ಅದನ್ನು ತಿರುಗಿಸಿದಾಗ ಹುಲಿ ಗರ್ಜಿಸಿದಂತೆ ಹಾಗೂ ಕೆಳಗೆ ಬಿದ್ದಿರುವ ಬ್ರಿಟಿಷ್ ಸೈನಿಕ ನೋವಿನಿಂದ ನರಳಿದಂತೆ ಶಬ್ದವಾಗುತ್ತದೆ. ಅಷ್ಟಲ್ಲದೆ ಅವನ ಎಡಗೈ ಸಹ ನೋವಿಗೋ ಏನೋ ಎನ್ನುವಂತೆ ಚಲಿಸುತ್ತದೆ. ಆ ಹುಲಿ ಯಂತ್ರದ ಉದ್ದೇಶ ಬ್ರಿಟಿಷನನ್ನು ಕೊಲ್ಲುವುದರ ಸೂಚಕವಷ್ಟೇ ಆಗಿರಲಿಲ್ಲ. ಅದು ಸಂಗೀತ ವಾದ್ಯವೂ ಆಗಿತ್ತು. ಹುಲಿಯ ಬೆನ್ನನ್ನು ಪೆಟ್ಟಿಗೆಯ ಮುಚ್ಚಳದಂತೆ ಎತ್ತಿ ಹಿಂದಕ್ಕೆ ಮಡಚಿದರೆ ದಂತದ ಕೀಲಿಮಣೆಯಿದ್ದು ಸಂಗೀತ ನುಡಿಸಬಲ್ಲ ವಾದ್ಯವೂ ಆಗುತ್ತಿತ್ತು.

## ಏಕೆ ನಿರ್ಮಿಸಿದ?

ಟಿಪ್ಪೂ ಆ ಯಂತ್ರ ಏಕೆ ನಿರ್ಮಿಸಿದ? ಅವನ ಮುಖ್ಯ ಉದ್ದೇಶ ತನ್ನ ಶತ್ರುಗಳಾದ ಬ್ರಿಟಿಷರನ್ನು ಹೆದರಿಸುವುದೇ ಆಗಿತ್ತು ಹಾಗೂ ಆತ ಅದರಲ್ಲಿ ಯಶಸ್ವಿಯೂ ಆದ. ಟಿಪ್ಪೂ ತನ್ನ ಶೌರ್ಯದ ಸಂಕೇತವಾಗಿ ಹುಲಿಯನ್ನು ಆಯ್ದುಕೊಂಡರೆ, ಬ್ರಿಟಿಷರ ಲಾಂಛನ ಸಿಂಹವಾಗಿತ್ತು. ಬ್ರಿಟಿಷರೂ ಸಹ ಸಿಂಹವನ್ನು ಸಾಂಕೇತಿಕವಾಗಿ ಬಳಸಿಕೊಂಡರು. ಟಿಪ್ಪೂ 1799ರಲ್ಲಿ ನಾಲ್ಕನೇ ಮೈಸೂರು ಯುದ್ಧದಲ್ಲಿ ಶ್ರೀರಂಗಪಟ್ಟಣದಲ್ಲಿ ಸತ್ತಾಗ, ಆ ಯುದ್ಧದಲ್ಲಿ ಸೆಣಸಿದ ಬ್ರಿಟಿಷ್ ಸೈನಿಕರಿಗೆ ಹುಲಿಯನ್ನು ಕೊಲ್ಲುತ್ತಿರುವ ಸಿಂಹದ ಚಿತ್ರವಿರುವ ಚಿನ್ನದ, ಬೆಳ್ಳಿಯ ಹಾಗೂ ಕಂಚಿನ 'ಸೆರಿಂಗಪಟಮ್ ಪದಕ'ಗಳನ್ನು ಅವರ ಹುದ್ದೆಗಳ ಅನುಸಾರ ನೀಡಿ ಸನ್ಮಾನಿಸಿದ್ದಾರೆ.

ಅಂತಹ ಒಂದು ಪದಕವನ್ನು ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಂನಲ್ಲಿ ಟಿಪ್ಪೂನ ಗಡಿಯಾರದ ಪಕ್ಕದಲ್ಲೇ ಇರಿಸಿದ್ದಾರೆ. 1857ರ ಸಿಪಾಯಿ ದಂಗೆಯ ಸಮಯದಲ್ಲಿ 'ಪಂಚ್' ವ್ಯಂಗ್ಯಚಿತ್ರ ಪತ್ರಿಕೆಯಲ್ಲಿ ಪ್ರಕಟವಾದ ಒಂದು ವ್ಯಂಗ್ಯಚಿತ್ರದಲ್ಲಿ ಹುಲಿಯೊಂದು ಅಸಹಾಯಕ ಹೆಣ್ಣು